# 14

# “ಈ ರೊಟ್ಟಿಯನ್ನು ತಿನ್ನಿರಿ”

# (6:16-69)

ಒಂದು ಭಾನುವಾರ ಒಬ್ಬ ಚಿಕ್ಕ ಬಾಲಕನು ದೇವಾಲಯದಿಂದ ಮನೆಗೆ ಹಿಂದಿರುಗಿ ಬಂದನು ಮತ್ತು ಅವನು ಬೈಬಲ್ ಕ್ಲಾಸಿನಲ್ಲಿ ಕಲಿತ ಪಾಠದ ಬಗ್ಗೆ ತನ್ನ ತಾಯಿಗೆ ಹೇಳಲು ಪ್ರಾರಂಭಿಸಿದನು. “ಅಲ್ಲಿ ಮೋಶೆ ಎಂಬ ಹೆಸರಿನ ಒಬ್ಬ ಮನುಷ್ಯನಿದ್ದನು. ಅವನು ಈ ಜನರನ್ನು ಐಗುಪ್ತದಿಂದ ಹೊರಗೆ ನಡಿಸಿಕೊಂಡು ಬರುತ್ತಿದ್ದಾಗ ಅವರು ಸಮುದ್ರ ಮತ್ತು ಅವರ ವೈರಿಗಳ ಸೇನೆಯ ಮಧ್ಯದಲ್ಲಿ ಸಿಕ್ಕಿಕೊಂಡರು” ಎಂದು ಪ್ರಾರಂಭಿಸಿದನು. “ಅವನು ಏನನ್ನು ಮಾಡಿದನು?” ಅವನು ಮುಂದುವರಿಸುವಂತೆ ಪ್ರೋತ್ಸಾಹಿಸಲು ಅವನಿಗೆ ಪ್ರಶ್ನಿಸಿದಳು. “ಅವನು ಎಂಜಿನಿಯರ್‌ಗಳನ್ನು ಕರೆದನು ಮತ್ತು ಜನರು ತಪ್ಪಿಸಿಕೊಂಡು ಹೋಗುವಂತೆ ಸಮುದ್ರದ ಮೇಲೆ ಒಂದು ಸೇತುವೆ ಕಟ್ಟಿದನು. ಆಮೇಲೆ, ಜನರು ಸಮುದ್ರವನ್ನು ದಾಟಿ ಹೋಗಿ ಇನ್ನೊಂದು ತೀರವನ್ನು ಸುರಕ್ಷಿತವಾಗಿ ತಲುಪಿದಾಗ, ಐಗುಪ್ತರ ಸೈನ್ಯವು ಸೇತುವೆಯ ಮೇಲೆ ದಾಟಲು ಪ್ರಾರಂಭಿಸಿತು. ಆಗ ಮೋಶೆಯು ವಿಮಾನ ದಾಳಿಗಳನ್ನು ಮಾಡಿಸಿ, ಅವರು ಸೇತುವೆ ಯನ್ನು ಒಡೆದು ಹಾಕುವಂತೆ ಮಾಡಿದನು” ಎಂದು ಹೇಳಿದನು. ತಾಯಿಯು ಒಬ್ಬ ಬೈಬಲ್ ಪಂಡಿತಳಲ್ಲದಿದ್ದರೂ, ಆಕೆ ಕಥೆಯನ್ನು ಜ್ಞಾಪಿಸಿಕೊಂಡಾಗ ಆ ರೀತಿಯಲ್ಲಿ ಇದ್ದಿಲ್ಲ ವೆಂದು ತಿಳಿದಿದ್ದಳು. “ಅದು ನಿಜವಾಗಿಯೂ ಆ ರೀತಿಯಲ್ಲಿ ಸಂಭವಿಸಿತೆಂದು ನಿನ್ನ ಶಿಕ್ಷಕಿ ಹೇಳಿದ್ದಳೋ?” ಎಂದು ಆಕೆ ಕೇಳಿದಳು. “ಇಲ್ಲ, ನನ್ನ ಶಿಕ್ಷಕಿ ನನಗೆ ಹೇಳಿದ್ದನ್ನು ನಾನು ನಿನಗೆ ಹೇಳಿದರೆ, ನೀನು ಅದನ್ನು ಎಂದೂ ನಂಬುವದಿಲ್ಲ” ಎಂದು ಮಗನು ಉತ್ತರ ಕೊಟ್ಟನು![1]

ಐದು ಸಾವಿರ ಜನರಿಗೆ ಊಟ ಮಾಡಿಸಿದ್ದು ಕೇವಲ ಒಂದು ಕಥೆಯಾಗಿದೆ. ಯೇಸುವು ಹಸಿದ ಐದು ಸಾವಿರ ಜನರಿಗೆ ಐದು ರೊಟ್ಟಿ ಎರಡು ಮೀನುಗಳಿಂದ ಊಟ ಬಡಿಸಿದನು. ಜನರು ಎಲ್ಲರೂ ತೃಪ್ತಿಪಟ್ಟುಕೊಂಡ ನಂತರ ಹನ್ನೆರಡು ಬುಟ್ಟಿ ತುಂಡುಗಳು ಕೂಡಿಸಲ್ಪಟ್ಟವು. “ಒತ್ತಾಯದಿಂದ ಆತನನ್ನು ತೆಗೆದು ಕೊಂಡು ಹೋಗಿ ಆತನನ್ನು ಅರಸನನ್ನಾಗಿ ಮಾಡ ಬೇಕೆಂದಿದ್ದರು” ಎಂಬುದರಲ್ಲಿ ಆಶ್ಚರ್ಯವೇನೂ ಇರುವುದಿಲ್ಲ (6:15). ಅವರು ಈಗಲೇ ನೋಡಿದ (ಮತ್ತು ರುಚಿ ನೋಡಿದ) ಬಲವು, ಅವರು ಅರ್ಥಮಾಡಿಕೊಳ್ಳುವ ಸಾಧ್ಯತೆಗಿಂತ ಹೆಚ್ಚಿನದಾಗಿತ್ತು.

ಜನರ ಗುಂಪು ತನ್ನನ್ನು ತಮ್ಮ ಅರಸನನ್ನಾಗಿ ಮಾಡಲು ಒತ್ತಾಯಿಸುವರೆಂಬುದನ್ನು ತಿಳಿದು ಕೊಂಡು, ಆತನು, “ತಿರಿಗಿ ತಾನೊಬ್ಬನೇ ಒಂಟಿಗನಾಗಿ ಬೆಟ್ಟಕ್ಕೆ ಹೋಗಿ ಬಿಟ್ಟನು” (6:15). ಮತ್ತಾಯ ಮತ್ತು ಮಾರ್ಕನು ಇಬ್ಬರೂ ಯೇಸುವು ಮೊದಲು ಹನ್ನೆರಡು ಜನರನ್ನು ದೋಣಿ ಯಲ್ಲಿ ಕಳುಹಿಸಿದನೆಂದೂ ಮತ್ತು ಆಮೇಲೆ ಜನರನ್ನು ಕಳುಹಿಸಿ ಬಿಟ್ಟನೆಂದೂ ದಾಖಲೆ ಮಾಡಿದ್ದಾರೆ (ಮತ್ತಾಯ 14:22; ಮಾರ್ಕ 6:45). “ಯೇಸುವು ... ತಿರುಗಿ ತಾನೊಬ್ಬನೇ ಒಂಟಿಗನಾಗಿ ಬೆಟ್ಟಕ್ಕೆ ಹೋದನು” (6:15) ಎಂದು ಯೋಹಾನನು ಅಷ್ಟನೇ ಹೇಳಿದ್ದಾನೆ. ಸಾಯಂಕಾಲವಾದಾಗ, ಆತನ ಶಿಷ್ಯರು ಒಂದು ದೋಣಿಯಲ್ಲಿ, ಕಪೆರ್ನೌಮಿನ ಕಡೆಗೆ ಹಿಂದಿರುಗಿ ಹೊರಟಿದ್ದರು. ಈ ಸಂದರ್ಭದಲ್ಲಿ, ಯೇಸುವನ್ನು ಹೊರತುಪಡಿಸಿ, ಕಥೆಯಲ್ಲಿಯ ಪ್ರತಿಯೊಬ್ಬರೂ, ಭಯಂಕರವಾಗಿ ಗಲಿಬಿಲಿಗೊಂಡಿದ್ದಿರ ಬಹುದು. ಅವರ ಕಣ್ಣುಗಳಲ್ಲಿ ಆತನು ಚಮತ್ಕಾರದ ಯಶಸ್ಸಿಗೆ ತನ್ನ ಬೆನ್ನನು ತಿರುಗಿಸಿದಂತೆ ತೋರಿರ ಬಹುದು. “ಆತನು ಏನನ್ನು

ಯೋಚಿಸುತ್ತಿದ್ದನು?" ಎಂದು ಅವರು ನಿಶ್ಚಯವಾಗಿ ಆಶ್ಚರ್ಯಪಟ್ಟರು.

ಆ ರಾತ್ರಿ ಹನ್ನೆರಡು ಜನರು ಇನ್ನೂ ಹೆಚ್ಚು ಗಲಿಬಿಲಿಗೊಂಡರು. ಕತ್ತಲೆಯಲ್ಲಿ ಅವರು ಸರೋವರವನ್ನು ದಾಟುತ್ತಿದ್ದಾಗ, ಬಲವಾದ ಬಿರುಗಾಳಿ ಎದ್ದು, ಅವರ ದೋಣಿಯನ್ನು ಮುಳುಗಿಸುವಂತೆ ಭಯಪಡಿಸಿತು (6:16-18). ಆಗ ಅವರು ಯೇಸುವು ನೀರಿನ ಮೇಲೆ ನಡೆದು ಬರುತ್ತಿರುವದನ್ನು ನೋಡಿದರು. ಅವರ ಭಯವನ್ನು ನೋಡಿ, ಆತನು ಅವರಿಗೆ, "ಅಂಜಬೇಡಿರಿ, ನಾನು" (6:20) ಎಂದು ಹೇಳಿದನು. ಆತನು ಅವರ ದೋಣಿ ಯನ್ನು ಪ್ರವೇಶಿಸಿದಂತೆ, ಅದು ಕಪೆರ್ನೌಮನ್ನು ತಲುಪಿತು. ಭಾವೋದ್ವೇಗ, ವಿಸ್ಮಯ, ಅತ್ಯಂತ ಆನಂದ, ಇನ್ನೂ ಹೆಚ್ಚಾದ ಅತ್ಯಂತ ನಿರಾಶೆ, ಗಲಿಬಿಲಿ, ಭಯಾನಕತೆ, ಹೆದರಿಕೆ, ಮತ್ತು ಮಿತಿಮೀರಿದ ಉಪಶಮನ: ಶಿಷ್ಯರು ಇದೆಲ್ಲವನ್ನೂ ಕೇವಲ ಒಂದೇ ದಿನದಲ್ಲಿ ಅನುಭವಿಸಿದರು!

ಮರುದಿನ, ಆತನನ್ನು ಮೊದಲು ಹಿಂಬಾಲಿಸಿದ್ದ ಹಾಗೂ ರೊಟ್ಟಿಯನ್ನು ಮೀನನ್ನೂ ತಿಂದಿದ್ದ ಜನರ ಗುಂಪು, ಯೇಸುವಿಗಾಗಿ ಹುಡುಕಲು ಪ್ರಾರಂಭಿಸಿತು. ಆತನು ಕಪೆ ರ್ನೌಮಿನಿಂದ ಬಂದವನೆಂದು ತಿಳಿದು (ಆತನ ಪ್ರಬುದ್ಧ ಸೇವೆಯ ಸಮಯದಲ್ಲಿ ಆತನ ಮನೆಯು ಇದ್ದ ಸ್ಥಳ), ಆತನನ್ನು ಕಂಡು ಕೊಳ್ಳಲು ಅಲ್ಲಿಗೆ ದೋಣಿಗಳಲ್ಲಿ ಹೊರಟರು. ಆ ದಿನದಂದು ಎಷ್ಟು ಜನರು ಪ್ರಯಾಣ ಮಾಡಿದರೆಂಬುದನ್ನು ಯೋಹಾನನು ದಾಖಲೆ ಮಾಡಿರುವದಿಲ್ಲ, ಆದರೆ ಹೆಚ್ಚಾದ ಜನರು ಯೇಸುವನ್ನು ತಮ್ಮ ಅರಸನನ್ನಾಗಿ ಮಾಡಿಕೊಳ್ಳಲು ಬಯಸಿದ್ದರೆಂದು ತೋರುತ್ತದೆ. ಕಪೆರ್ನೌಮಿನಲ್ಲಿ ತಲುಪಿದ ನಂತರ, ಅವರು ಸಭಾಮಂದಿರದಲ್ಲಿ ಯೇಸುವನ್ನು ಕಂಡುಕೊಂಡರು (6:59). ಯೇಸುವು ಪ್ರಸಂಗಿಸಿದ ಅತೀ ಕಷ್ಟಕರವಾದ ಮತ್ತು ಬೇಡಿಕೆಯುಳ್ಳ ಪ್ರಸಂಗಗಳಲ್ಲಿ ಒಂದನ್ನು ಅವರು ಕೇಳಲಿಕ್ಕಿರುವರು ಎಂಬುದನ್ನು ತಿಳಿದಿರಲಿಲ್ಲ; ಯೇಸುವು ಜೀವದ ರೊಟ್ಟಿ ಆಗಿದ್ದಾನೆ ಎಂಬುದನ್ನು ಅವರು ಕೇಳಲಿಕ್ಕಿದ್ದರು.

## ಬೋಧನೆ (6:25-59)

### ಸುಲಭವಾದ ಶಿಷ್ಯತ್ವ (6:25-34)

ಯೋಹಾನನ ಸುವಾರ್ತೆಯ ನಮ್ಮ ಅಧ್ಯಾಯನದ ಈ ಹಂತದಿಂದ, ಮರುದಿನ ಯೇಸುವು ಮೆಚ್ಚಿಕೆಯ ಮೃದುವಾದ ಮಾತುಗಳಿಂದಲೂ ಸ್ವೀಕಲಿಸುವೆಯಿಂದಲೂ ಜನ ಸಮೂಹವನ್ನು ವಂದಿಸಲಿಲ್ಲ ಎಂಬುದನ್ನು ತಿಳಿದುಕೊಳ್ಳಲು ನೀವು ಬಹುಶಃ ಆಶ್ಚರ್ಯಪಡಲಿಕ್ಕಿಲ್ಲ. ಹಠಾತ್ತನೆ ಅದು ಆತನು ನಿಕೊದೇಮನಿಗೆ ಉತ್ತರ ಕೊಟ್ಟ ರೀತಿಯನ್ನು ನಮ್ಮ ಮನಸ್ಸಿಗೆ ತರುತ್ತದೆ (3:3), ಯೇಸುವು ಕೂಡಲೆ ಜನರ ಗುಂಪನ್ನು ಗದರಿಸಿದನು;

> ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ನನ್ನನ್ನು ಹುಡುಕುವುದು ಸೂಚಕ ಕಾರ್ಯಗಳನ್ನು ನೋಡಿದ್ದರಿಂದಲ್ಲ, ಆ ರೊಟ್ಟಿ ತಿಂದು ಹೊಟ್ಟೆ ತುಂಬಿಸಿಕೊಂಡದ್ದರಿಂದಲೇ. ದುಡಿಯಿರಿ; ಕೆಟ್ಟು ಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ; ಇಂಥ ಆಹಾರವನ್ನು ಮನುಷ್ಯ ಕುಮಾರನು ನಿಮಗೆ ಕೊಡುವನು; ಇದಕ್ಕಾಗಿ ತಂದೆಯಾದ ದೇವರು ಆತನನ್ನು ನೇಮಿಸಿ ಮುದ್ರೆ ಹಾಕಿದ್ದಾನೆ (ಯೋಹಾನ 6:26, 27).

ಜನರು ದೇವರಿಂದ, ಒಂದು ಸೂಚಕ ಕಾರ್ಯವನ್ನು ನೋಡಿದ್ದಾರೆ ಎಂದು ಯೇಸು ಒತ್ತಿ ಹೇಳಿದನು. ಯೇಸುವಿನ ಜೀವನದ ಮೇಲೆ ದೇವರ ಹಸ್ತವಿರುವದನ್ನು ಅವರು ಗುರುತಿಸಿದರು, ಆದರೆ ಅವರಿಗೆ ಯೇಸುವಿನೊಂದಿಗೆ ಇರಬೇಕೆಂದು ದೇವರು ಬಯಸಿದ ರೀತಿಯ ಸಂಬಂಧವನ್ನು ನೋಡುವದರಲ್ಲಿ ಅವರು ಸೋತು ಹೋದರು. ತಮಗೆ

ತಂದೆಯನ್ನು ತೋರಿಸಲು ಆತನನ್ನು ನಂಬುವದರ ಬದಲು, ಜನರ ಗುಂಪು ಅದ್ಭುತಕರವಾದ ಊಟದ ಅರ್ಥವೇನೆಂಬುದರ ಬಗ್ಗೆ ತಮ್ಮ ಸ್ವಂತ ತೀರ್ಮಾನಕ್ಕೆ ಕೂಡಲೇ ಬಂದಿತು; ಅವರು ನಂಬಿದರು (ಪದದ ಒಂದು ಅರ್ಥದಲ್ಲಿ) ಎಂದು ಹೇಳ ಬಹುದು, ಅದೇ ಸಮಯದಲ್ಲಿ ಅವರು ನಿಜವಾಗಿಯೂ ನಂಬದೇ ಇರುವವರಾಗಿದ್ದರು (ಯೋಹಾನನ ಸುವಾರ್ತೆಯಲ್ಲಿ ಯೇಸುವು ಪದವನ್ನು ನಿರೂಪಿಸಿದ ಅರ್ಥದಲ್ಲಿ).

ಯೇಸುವು ಸಹ, ಜನರ ಗುಂಪು ಆತನನ್ನು ತಮ್ಮ ಭೌತಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಒಂದು ಸಾಧನದಂತೆ ನೋಡಿತು ಎಂದು ಅರಿತುಕೊಂಡನು. ಅವರು "ರೊಟ್ಟಿಯನ್ನು ತಿಂದು ಹೊಟ್ಟೆ ತುಂಬಿಸಿಕೊಂಡಿದ್ದರು" (6:26). ಇದೇ ಸೋಲುವಿಕೆಯು ಈ ಜೀವನದಲ್ಲಿ ಕೇವಲ ಆಶೀರ್ವಾದಗಳನ್ನು ಪಡೆಯಲು ಯೇಸುವನ್ನು ಒಬ್ಬನು ಹಿಂಬಾಲಿಸುವಾಗ ಯಾವುದೇ ಸಮಯದಲ್ಲಿ ಕಂಡು ಬರುವುದು. ಉದಾಹರಣೆಗಾಗಿ, ಯೇಸುವು ತನ್ನ ವ್ಯಾಪಾರವನ್ನು, ಮದುವೆಯನ್ನು ಇಲ್ಲವೇ ಆರೋಗ್ಯವನ್ನು ಸುಧಾರಿಸುವನು ಮತ್ತು ಕಾಪಾಡುವನು ಎಂದು ನಂಬುವದರಿಂದ ಒಬ್ಬನು ಆತನನ್ನು ಹಿಂಬಾಲಿಸಬಹುದು, ಇದೆಲ್ಲವೂ ಸತ್ಯವಾಗಿರಬಹುದಾಗಲೂ, ಯೇಸುವಿನ ಅತೀ ದೊಡ್ಡ ಚಿಂತನೆಯು ಜನರು ತನ್ನ ಮುಖಾಂತರವಾಗಿ ತಂದೆಯನ್ನು ತಿಳಿದುಕೊಳ್ಳಲು ಬರ ಬೇಕೆಂದು ಯಾವುದೇ ಕಡಿಮೆಯಾದದ್ದು ಕಪಟ ಧರ್ಮವಾಗಿದೆ! ಆತನು ಕೊಡುವಂಥದ್ದರ ಕಾರಣದಿಂದ ಮಾತ್ರವೇ ಯೇಸುವನ್ನು ಹಿಂಬಾಲಿಸುವ "ಸುಲಭ ಶಿಷ್ಯತ್ವದ" ಅಭಿಪ್ರಾಯವು ಯೇಸುವನ್ನು ತಿರಸ್ಕರಿಸುವ ವಿಚಾರವಾಗಿರುತ್ತದೆ.

"ದೇವರಿಗೆ ಮೆಚ್ಚಿಕೆಯಾದ ಕೆಲಸಗಳನ್ನು ನಾವು ನಡಿಸಬೇಕಾದರೆ ಏನು ಮಾಡಬೇಕು?" ಎಂದು ಜನರ ಗುಂಪು ಯೇಸುವನ್ನು ಕೇಳಲು ಪ್ರಾರಂಭಿಸಿತು (6:28). "ದೇವರು ಮೆಚ್ಚುವ ಕೆಲಸ ಯಾವುದೆಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ" (6:29) ಎಂದು ಯೇಸು ಉತ್ತರ ಕೊಟ್ಟನು. ಪುನಃ ನಾವು "ನಂಬಿರಿ" ಎಂಬುದರ ಬಗ್ಗೆ ಯೋಹಾನನ ಸುವಾರ್ತೆಯು ಎಲ್ಲವೂ ಆಗಿದೆ ಎಂಬುದು ನಮಗೆ ಜ್ಞಾಪಿಸಲ್ಪಟ್ಟಿದೆ (20:31), ಮತ್ತು ಅದರ ಅರ್ಥ ಕೆಲವೊಂದನ್ನು ನಾವು ನಿಜವೆಂದು ಕೆಲವು ಸ್ವೀಕರಿಸುವದಕ್ಕಿಂತ ಹೆಚ್ಚಿನದಾಗಿದೆ. ಆಗ ಜನರು ಮೋಶೆಯ ಕಾಲದಲ್ಲಿ "ಪರಲೋಕದಿಂದ ಬಂದ ರೊಟ್ಟಿ"ಯಾಗಿದ್ದ ಮನ್ನದ ವಿಷಯವನ್ನು ಹೇಳಿದರು. ದೇವರು ಈಗ ಅವರಿಗೆ ಮೋಶೆಯು ಕೊಟ್ಟಿಂದಕ್ಕಿಂತ ಹೆಚ್ಚು ದೊಡ್ಡದಾದದ್ದನ್ನು "ನಿಜವಾದ ರೊಟ್ಟಿಯನ್ನು" ಅವರಿಗೆ ಕೊಡುತ್ತಿದ್ದೇನೆಂದು ಯೇಸುವು ಉತ್ತರ ಕೊಟ್ಟನು. ಕಥೆಯಲ್ಲಿ ಈ ಹಂತದಲ್ಲಿ, ಜನರು ಸಮಾರ್ಯದ ಸ್ತ್ರೀಯು ಯೇಸುವಿನೊಂದಿಗೆ ಮಾಡುತ್ತಿದ ಸಂಭಾಷಣೆಯಲ್ಲಿಯ ಇಂಥದೇ ಹಂತದಲ್ಲಿ ಮಾಡಿದಂತೆ ಉತ್ತರ ಕೊಟ್ಟರು (4:15): ಯೇಸುವು ಮಾತಾಡಿದಂಥ ರೊಟ್ಟಿಯನ್ನು ತಮಗೆ ಕೊಡಬೇಕೆಂದು ಜನರು ಆತನನ್ನು ಕೇಳಿದರು. ಆಗ ಯೇಸುವು ಅವರ ಬೇಡಿಕೆಯನ್ನು ಯೇಸುವನ್ನು ಹಿಂಬಾಲಿಸುವದರ ಆಳವಾದ ಅರ್ಥವನ್ನು ಅವರಿಗೆ ಬೋಧಿಸಲು ಒಂದು ಅವಕಾಶವನ್ನಾಗಿ ಆತನು ತೆಗೆದುಕೊಂಡನು.

### ಕಠಿಣವಾದ ಶಿಷ್ಯತ್ವ (6:35-52)

"ಜೀವಕೊಡುವ ರೊಟ್ಟಿ ನಾನೇ" (6:35) ಎಂಬ ಪದಗಳು ಜನರ ಗುಂಪಿನೊಂದಿಗೆ ಯೇಸುವಿನ ಸಂದರ್ಶನದಲ್ಲಿ ಒಂದು ಬಾಂಬಿನಂತೆ ಸ್ಫೋಟ ಗೊಂಡಿರಬೇಕು. "ನಾನೇ" ಎಂಬ ಮಾತು, ಉರಿಯುವ ಪೊದೆಯಲ್ಲಿ ಮೋಶೆಗೆ ದೇವರು ಹೇಳಿದ, "ಇರುವಾತನೇ ಆಗಿದ್ದೇನೆ" (ವಿಮೋಚನಾಕಾಂಡ 3:14ಬಿ) ಎಂಬ ಮಾತುಗಳಂತೆ ಕೇಳಿಸಿರಬೇಕು. ಇದು ಒಂದು ಆಕಸ್ಮಿಕವಲ್ಲ; ಯೋಹಾನನ ಸುವಾರ್ತೆಯಲ್ಲಿ ಯೇಸುವು ತನ್ನ ದೈವತ್ವದೊಂದಿಗೆ ಸತತವಾಗಿ ಜನರನ್ನು ಎದುರಿಸುತ್ತಿದ್ದನು. ಅವರ ಆಳವಾದ ಅಗತ್ಯತೆಗಳನ್ನು ತೃಪ್ತಿಪಡಿಸಬಲ್ಲಾತನು ಕೇವಲ ಒಬ್ಬನೇ ಎಂಬತೆ ತನ್ನನ್ನು ಮುಂದಿಡಲು ಯೇಸುವು

ಮುಂದುವರಿಸಿದನು. ನಮಗೆ ನಿಜವಾಗಿ ನಮ್ಮ ಪ್ರಾಣಗಳ ಆಳವಾದ ಅಗತ್ಯತೆಗಳನ್ನು ದೇವರು ಪೂರೈಸುವದಕ್ಕಾಗಿ ನಮಗೆ ಅಗತ್ಯತೆಯಿರುವಾಗ, ಬಹಳ ಸಲ, ನಾವು ನಮ್ಮ ಎರಡನೆಯ ತರಗತಿಯ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ದೇವರ ಬಳಿಗೆ ಬರುತ್ತೇವೆ. ಅವರ ದೊಡ್ಡ ಅಗತ್ಯತೆಯು ಹೊಟ್ಟೆ ತುಂಬಿಸಿಕೊಳ್ಳುವುದರಲ್ಲಿ, ಆದರೆ ಪೂರ್ಣ ಆತ್ಮಗಳಿಗಾಗಿ ಎಂಬುದನ್ನು ಯೇಸುವು ಗ್ರಹಿಸಿಕೊಂಡನು. ತಮ್ಮ ಆತ್ಮಗಳನ್ನು ತುಂಬಿಸಿಕೊಳ್ಳಲಿಕ್ಕೆ ಆಹಾರದಂತೆ ಯೇಸುವು ತನ್ನನ್ನೇ ಕೊಟ್ಟನು. ಆಹಾರ ಮತ್ತು ರಾಜಕೀಯ ಸ್ವಾತಂತ್ರ್ಯದೊಂದಿಗೆ ತಮ್ಮ ಕಡಿಮೆ ತರಗತಿಯ ಅಗತ್ಯತೆಗಳನ್ನು ತುಂಬಿಸಿಕೊಳ್ಳಲು ಜನರು ಹುಡುಕುತ್ತಿರುವದನ್ನು ಯೇಸುವು ತಿಳಿದಿದ್ದನು. ಅವರಿಗೆ ಅತ್ಯಗತ್ಯವಾಗಿ ಬೇಕಾದದ್ದು ದೇವರು ಎಂಬುದನ್ನು ಆತನು ತಿಳಿದಿದ್ದನು!

ಜನರ ಪ್ರತಿಕ್ರಿಯೆಯು ಗುಣುಗುಟ್ಟುವದಾಗಿತ್ತು. ಪುನಃ ದೇವರು ತಮ್ಮ ಬಗ್ಗೆ ಹೆಚ್ಚು ಗಮನ ವಹಿಸಿರುವದಿಲ್ಲವೇನೋ ಎಂಬಂತೆ ಇಸ್ರಾಯೇಲ್ಯರು ಸತತವಾಗಿ ಗುಣುಗುಟ್ಟಿದ್ದರ ಬಗ್ಗೆ ವಿಮೋಚನಾಕಾಂಡದಲ್ಲಿಯ ಕಥೆಯು ನಮ್ಮ ಜ್ಞಾಪಕಕ್ಕೆ ಬರುತ್ತದೆ. ಈ ಸಮಯದಲ್ಲಿ ಯೇಸುವು ತನ್ನ ಬಗ್ಗೆ ದೊಡ್ಡ ದೊಡ್ಡ ಹೇಳಿಕೆಗಳನ್ನು ಕೊಡುತ್ತಿದ್ದುದರ ಕಾರಣದಿಂದ ಯೆಹೂದ್ಯರು ಗುಣುಗುಟ್ಟಿದರು. ಕೆಲವರು ಯೇಸುವಿನ ಮಾನವ ಕುಟುಂಬದ ಬಗ್ಗೆ ಮಾತನಾಡಿದರು. ಅದನ್ನು ಅವರು ಸಾಮಾನ್ಯವಾದ ಪ್ರಾರಂಭಗಳೆಂದು ದೃಷ್ಟಿಸಿದ್ದರು. ಆತನನ್ನು ಒಬ್ಬ "ಪ್ರವಾದಿಯಂತೆ" (6:14) ಒಪ್ಪಿಕೊಳ್ಳಲು ಶಕ್ತರಾಗಿದ್ದಂತೆ ತೋರುತ್ತದೆ ಮತ್ತು ಅವರು ಆತನನ್ನು ತಮ್ಮ ಅರಸನನ್ನಾಗಿ ಮಾಡಲು ಕುತೂಹಲವುಳ್ಳವರಾಗಿದ್ದರು. ಆದರೆ ಅವರು ಆತನನ್ನು ಪರಲೋಕದಿಂದ ಬಂದ ದೇವರ ಕುಮಾರನಂತೆ ಆತನ ಪರಿಪೂರ್ಣತೆಯಲ್ಲಿ ಸ್ವೀಕರಿಸಲು ಶಕ್ತರಾಗಿರಲಿಲ್ಲ. ಆತನ ಬೋಧನೆಯಿಂದ ಗಲಿಬಿಲಿ ಗೊಂಡಿದ್ದ ಹಾಗೂ ಕೆರಳಿಸಲ್ಪಟ್ಟ ಜನ ಸಮೂಹದೊಂದಿಗೆ, ಯೇಸುವು ಮುಂದೆ ಏನು ಮಾಡಿದನೆಂದು ನೀವು ಯೋಚಿಸುತ್ತೀರಿ? ನನ್ನ ಪ್ರವೃತ್ತಿಯು ವಾಗ್ವಾದವನ್ನು ಕಡಿಮೆ ಮಾಡಿ ಕೇಳುಗರನ್ನು ಆದರಿಸುವದಾಗಿದ್ದರೂ, ಯೇಸುವಿನ ತೀರ್ಮಾನವು ಬೈಬಲಿನಲ್ಲಿ ಬೇರೆ ಕಡೆಯಲ್ಲಿ ಕಂಡು ಬರುವ ಕೂಲಂಕುಶವಾದ ಹಾಗೂ ಕಠಿಣವಾದ ಬೋಧನೆಗಳಲ್ಲಿ ಕೆಲವೊಂದನ್ನು ಒತ್ತಿ ಹೇಳುವದಾಗಿತ್ತು.

## ಸಂಪೂರ್ಣ ಶಿಷ್ಯತ್ವ (6:53-56)

"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಅವನ ರಕ್ತವನ್ನು ಕುಡಿಯದೆ ಹೋದರೆ ನಿಮ್ಮೊಳಗೆ ಜೀವವಿಲ್ಲ" (6:53) ಎಂದು ಯೇಸು ಹೇಳಿದನು. ಕ್ರೈಸ್ತರ ವಿಶ್ವಾಸದ ಮೊದಲಿನ ವರ್ಷಗಳಲ್ಲಿ, ಕ್ರೈಸ್ತರಿಗೆ ವಿರುದ್ಧವಾಗಿ ನರಭಕ್ಷಕರೆಂಬ ದೂರು ಆಗಾಗ ಹೊರಿಸಲ್ಪಡುತ್ತಿತ್ತು. ಹೊರಗಿನವರು ಕ್ರೈಸ್ತರ ಭಾಷೆಯಿಂದ, ವಿಶೇಷವಾಗಿ ತನ್ನ ಮಾಂಸವನ್ನು ತಿಂದು ತನ್ನ ರಕ್ತವನ್ನು ಕುಡಿಯುವದರ ಬಗ್ಗೆ ಯೇಸುವಿನ ಮಾತುಗಳನ್ನು ಪುನರಾವರ್ತಿಸುವಾಗ, ಬಹಳ ಸಲ ಆಘಾತಕ್ಕೊಳಗಾಗುತ್ತಿದ್ದರು. ಅಂಥ ತೀಕ್ಷ್ಣವಾದ ಹೇಳಿಕೆಯಿಂದ ಆತನ ಅರ್ಥವು ಏನಾಗಿತ್ತು?

ಆತನ ಮಾತುಗಳು ಗುಂಪಿನಲ್ಲಿದ್ದ ಅನೇಕರಿಗೆ ಒಬ್ಬ ಹುಚ್ಚನ ಬುದ್ಧಿ ಭ್ರಮಣೆಯ ಮಾತುಗಳಂತೆ ಕೇಳಿಸಿರಬೇಕು, ಆದರೆ ಮನುಷ್ಯ ಕುಮಾರನೊಂದಿಗಿನ ಯೋಗ್ಯವಾದ ಸಂಬಂಧವು ತಿಂದು ಬಿಡುವಂಥದ್ದಾಗಿದೆ ಎಂಬುದನ್ನು ಯೇಸುವು ಒತ್ತಿ ಹೇಳಿದನು. ಕೇವಲ ಪರಿಚಿತರನ್ನು, ಸ್ನೇಹಿತರನ್ನು, ಸಿಪಾಯಿಗಳನ್ನು, ಇಲ್ಲವೇ ಪ್ರಜೆಗಳಿಗಿಂತ ಹೆಚ್ಚಾದದ್ದನ್ನು ಯೇಸುವು ಬಯಸಿದ್ದನು. ಪ್ರತಿಯೊಬ್ಬ ನಿಜವಾದ ಹಿಂಬಾಲಕನು "ನನ್ನಲ್ಲಿ ಇರುತ್ತಾನೆ, ಮತ್ತು ನಾನು ಅವನಲ್ಲಿರುತ್ತೇನೆ" (6:56) ಎಂದು ಯೇಸು ಒತ್ತಿ ಹೇಳಿದನು. ಆತನು ತನ್ನ ಅನುಯಾಯಿಗಳೊಂದಿಗೆ, ಒಬ್ಬ ಅರಸನು ತನ್ನ ಜನರೊಂದಿಗೆ, ಒಬ್ಬ ಸೇನಾಪತಿಯು ತನ್ನ ಸೇನೆಯೊಂದಿಗೆ ಇಲ್ಲವೇ ಒಬ್ಬ ರಬ್ಬಿಯು ತನ್ನ ವಿದ್ಯಾರ್ಥಿಗಳೊಂದಿಗೆ ಇರುವದಕ್ಕಿಂತ ಸಮೀಪದಲ್ಲಿರಬೇಕಾಗಿತ್ತು. ರೊಟ್ಟಿಯು ಜೀರ್ಣ ಮಾಡಲ್ಪಟ್ಟು ಅವರ ದೇಹಗಳಲ್ಲಿ ಪ್ರತಿಯೊಂದು

ಕಣದಿಂದ ಹೀರಿಕೊಳ್ಳಲ್ಪಡುವಂತೆಯೂ ಇರುವದನ್ನು ಯೇಸುವು ಒತ್ತಿ ಹೇಳಿದನು. "ನೀವು ನಿಮ್ಮ ಅಂತರಾಳದೊಳಗೆ ಇರುವಂತೆ ಬಿಡಿರಿ" ಎಂದು ಯೇಸುವು ಹೇಳುತ್ತಿದ್ದನೆಂದು ಬೇರೆ ಮಾತುಗಳಲ್ಲಿ ಹೇಳಬಹುದು.

ಯೇಸುವಿನ ಈ ಸಂದೇಶವು ಎರಡು ಸಾವಿರ ವರ್ಷಗಳ ಹಿಂದೆ ಇದ್ದಂತೆಯೇ ಇಂದೂ ಆಘಾತಕರವಾದದ್ದೂ ಭಯಪಡಿಸುವಂಥದ್ದೂ ಆಗಿರುತ್ತದೆ, ತನ್ನ ಹಿಂಬಾಲಕರಾಗಲು ಬಯಸುವವರಿಗೆ ಆಕಸ್ಮಿಕ ಸಂಬಂಧವನ್ನು ಆತನು ಇನ್ನೂ ತಿರಸ್ಕರಿಸುತ್ತಾನೆ. ನಮ್ಮ ರಕ್ತನಾಳದಲ್ಲಿಯ ರಕ್ತದಂತೆ, ನಮ್ಮ ಫುಪ್ಫುಸಗಳಲ್ಲಿಯ ಉಸುರಿನಂತೆ, ಇಲ್ಲವೇ ನಮ್ಮ ಎಲುಬುಗಳಲ್ಲಿಯ ನೆಣದಂತೆ - ಆತನು ನಮ್ಮೊಂದಿಗೆ ಸಮೀಪದಲ್ಲಿರಲು ಬಯಸುತ್ತಾನೆ. ನಮ್ಮ ಜೀವನಗಳ ರಹಸ್ಯ ಸ್ಥಳಗಳಲ್ಲಿ, ಅದು ನಮ್ಮ ಬ್ಯಾಂಕ್ ಅಕೌಂಟ್ ಆಗಿರಬಹುದು, ನಮ್ಮ ಮದುವೆಗಳಾಗಿರ ಬಹುದು ಇಲ್ಲವೇ ನಮ್ಮ ಮಹತ್ವಾಕಾಂಕ್ಷೆಗಳು ಆಗಿರಬಹುದು, ಇರುವದಕ್ಕೆ ಬಿಡಲ್ಪಡಬೇಕೆಂದು ಆತನು ಕೇಳಿ ಕೊಳ್ಳುತ್ತಾನೆ. ಜೀವದ ರೊಟ್ಟಿಯಂತೆ, ನೂರಕ್ಕೆ ನೂರರಷ್ಟು ನಮ್ಮೊಂದಿಗೆ ನಿಕಟ ಸಂಬಂಧಕ್ಕಿಂತ ಕಡಿಮೆಯಾದದ್ದನ್ನು ಆತನು ಸ್ವೀಕರಿಸುವದಿಲ್ಲ.

## ಉತ್ತರ (6:60-69)

### ಜನರ ಗುಂಪು (6:60-66)

ಯೇಸುವಿನ ಸಂದೇಶವನ್ನು ಕೇಳಿದಾಗ, ಜನರ ಗುಂಪು ಗುಣುಗುಟ್ಟುವದನ್ನು ಮುಂದರಿಸಿತು. ಈ ಬೋಧನೆಗಳು, "ಕಠಿಣವಾದವುಗಳು" ಎಂದು ಅವರು ಒಪ್ಪಿಕೊಂಡರು (6:60). ಬೋಧನೆಗಳು ಕಠಿಣವಾದವುಗಳಾಗಿದ್ದರಿಂದ, ಅವರ ಹೃದಯಗಳು ಕಠಿಣವಾದವು. ಆಗ, ಬೈಬಲ್‌ನಲ್ಲಿ ಅತೀ ದುಃಖಕರವಾದ ವಚನಗಳಲ್ಲಿ ಒಂದನ್ನು ಯೋಹಾನನು ದಾಖಲೆ ಮಾಡಿದನು. "ಇದರ ಪರಿಣಾಮವಾಗಿ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತ ಕೂಡ ಸಂಚಾರ ಮಾಡುವದನ್ನು ಬಿಟ್ಟರು" (6:66). ಇದು ಯೇಸುವಿನ ಗಲಿಲಾಯದಲ್ಲಿ ಬಹಿರಂಗ ಸೇವೆಯಲ್ಲಿ ತಿರುವಿನ ಬಿಂದುವಾಗಿತ್ತು. ಆತನು ಐದು ಸಾವಿರ ಜನರಿಗೆ ಊಟ ಮಾಡಿಸಿದ ದಿನದಂದು ಜನರ ಗುಂಪಿನಿಂದ ಆತನು ಅನುಭವಿಸಿದಂಥ ಪ್ರಸಿದ್ಧಿಯನ್ನೂ ಮೆಚ್ಚಿಕೆಯನ್ನು ಆತನು ಪುನಃ ಅನುಭವಿಸಲಿಲ್ಲ. ಗುಂಪುಗಳು ಬಂದವು, ಅವರು ಪರಲೋಕದಿಂದ ಬಂದ ಆಹಾರವನ್ನು ಊಟ ಮಾಡಿದ್ದರು, ಅವರು ಕುತೂಹಲ ಭರಿತರಾಗಿದ್ದರು, ಅವರು ಯೇಸುವಿನ ಕಠಿಣವಾದ ಬೋಧನೆಯನ್ನು ಕೇಳಿದ್ದರು, ಮತ್ತು ಅಂತ್ಯದಲ್ಲಿ, ಅವರು ಹೊರಟು ಹೋಗಿದ್ದರು. ಅವರು ಯೇಸುವನ್ನು ಅರಸನಂತೆ ಸ್ವೀಕರಿಸಲು ಸಿದ್ಧರಾಗಿದ್ದರು, ಆದರೆ ಆತನನ್ನು ತಮ್ಮ ರಕ್ಷಕನೆಂದು ಸ್ವೀಕರಿಸಲು ಸಿದ್ಧರಾಗಿರಲಿಲ್ಲ.

### ಹನ್ನೆರಡು ಜನರು (6:67-69)

ನಿರಾಶೆಗೊಂಡ ಮತ್ತು ಕೋಪಗೊಂಡ ಜನರು ಯೇಸುವಿನಿಂದ ದೂರ ಹೋಗಲು ಪ್ರಾರಂಭಿಸಿದಾಗ, ಆತನು ಹನ್ನೆರಡು ಜನರ ಕಡೆಗೆ ತಿರುಗಿ, ಅವರೂ ಸಹ ತನ್ನನ್ನು ಬಿಟ್ಟು ಹೋಗ ಬೇಕೆಂದಿರುವರೋ ಎಂದು ಪ್ರಶ್ನಿಸಿದನು. ಕೆಲವು ಸಲ ಮಾಡಿದಂತೆ, ಪೇತ್ರನು, ತಾನು ಅರಿತು ಕೊಂಡದ್ದಕ್ಕಿಂತ ಹೆಚ್ಚು ಉತ್ತರ ಕೊಟ್ಟನು. ಪ್ರತಿಭಾವಂತನಂತೆ "ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯ ಜೀವವನ್ನುಂಟು ಮಾಡುವ ವಾಕ್ಯಗಳುಂಟು" (6:68) ಎಂದು ಹೇಳಿದನು. ಪೇತ್ರನು ಮತ್ತು ಇತರ ಹನ್ನೊಂದು ಜನರು ಬಹುಶಃ ಇತರರಂತೆ ಗಲಿಬಿಲಿಗೊಂಡಿದ್ದರು ಮತ್ತು ನಿರಾಶೆಗೊಂಡಿದ್ದರು, ಆದರೆ ಅವರು ತಮ್ಮ ಅತ್ಯುತ್ತಮ ನಿರೀಕ್ಷೆಯಲ್ಲಿ ಯೇಸುವು ಉಳಿದನೆಂದು ಅವರು ಗುರುತಿಸಿದರು. ಆತನು ತಮ್ಮನ್ನು ಕೈ ಬಿಟ್ಟಿದ್ದಾನೆಂದು ಅವರು ವಿಚಾರಿಸಿದರು, ಅವರು ಇನ್ನೂ ಆತನಲ್ಲಿ ನಂಬಿಕೆಯಿಟ್ಟರು.

ಅವರು ಉಳಿದುಕೊಂಡು, ಇತರರು ಹೊರಟು ಹೋದಾಗ, ಹನ್ನೆರಡು ಜನರು ನಿಜವಾದ, ಬೈಬಲಿನ ನಂಬಿಕೆಯ ಕಡೆಗೆ ಇನ್ನೊಂದು ಹೆಜ್ಜೆಯನ್ನಿಟ್ಟರು.

ಫ್ರಾನ್ಸಿಸ್ ಶ್ಕಾಯೆಪ್ಫರ್[2] ಅವರು ಪೇತ್ರನು ಈ ವಾಕ್ಯಭಾಗದಲ್ಲಿ ಹೇಳಿದ್ದು ದೇವರಲ್ಲಿ ನಂಬಿಕೆಗೆ ಜನರನ್ನು ತರುವದಕ್ಕೆ ಬೀಗದ ಕೈ ಆಗಿದೆ ಎಂದು ನಂಬಿದನು, ಶ್ಕಾಯೆಪ್ಫರನು ದೇವರ ಬಗ್ಗೆ ಅವಿಶ್ವಾಸಿಗಳೊಂದಿಗೆ ಮಾತಾಡುವಾಗ, ಅವನು ನಂಬಿಕೆಗೆ ಪರ್ಯಾಯಗಳ ಕಡೆಗೆ ನೋಡಲು ಅವರನ್ನು ಒತ್ತಾಯಪಡಿಸುತ್ತಿದ್ದನು. ಪರಿಪೂರ್ಣ ಸರಿಯಾದದ್ದರೊಂದಿಗೆ ಇಲ್ಲವೇ ತಪ್ಪಾದದ್ದರೊಂದಿಗೆ, ನಿರೀಕ್ಷೆಯೊಂದಿಗೆ, ಮಾನವ ಗೌರವಕ್ಕೆ ತಳಹದಿಯಿಲ್ಲದ್ದ ರೊಂದಿಗೆ ಜೀವಿಸಲು ಸಿದ್ಧರಾಗಿರುವರೋ ಎಂದು ಅವನು ಕೇಳುವನು. ಅಂತಹ ಅರ್ಥವಿಲ್ಲದ್ದ ರೊಂದಿಗೆ ಮಾನವ ಜೀವಿಗಳು ಜೀವಿಸಲಾರವು ಎಂದು ಅವನು ದೃಢಪಡಿಸಲ್ಪಟ್ಟಿದ್ದನು. ಶ್ಕಾಯೆಪ್ಫರನು, ಪೇತ್ರನ ತಿಳುವಳಿಕೆಗೆ ಹಿಂದಿರುಗಿ ತರುವದಕ್ಕಾಗಿ ಜನರನ್ನು ನಿರಾಶೆಯ ಅಂಚಿಗೆ ತರುವನು: "ಸ್ವಾಮೀ, ನಿನ್ನನ್ನು ಬಿಟ್ಟು ನಾವು ಇನ್ಯಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯ ಜೀವವನ್ನು ಉಂಟು ಮಾಡುವ ವಾಕ್ಯಗಳುಂಟು."

## ಮುಕ್ತಾಯ

ಈ ಪಾಠವನ್ನು ಮುಗಿಸುವ ಮೊದಲು ನಾವು ಇನ್ನೊಂದು ಉತ್ತರವನ್ನು ಗಮನಿಸುವ ಅಗತ್ಯತೆಯಿರುವುದು: ಜನರ ಗುಂಪಿಗೆ ಯೇಸುವಿನ ಉತ್ತರ, ಯೋಹಾನನ ಸುವಾರ್ತೆಯು ಮೊದಲನೆಯ ಅಧ್ಯಾಯದಿಂದ ದೇವರ ನಿತ್ಯವಾಕ್ಯವು ಬಂದು, "ನಮ್ಮ ಮಧ್ಯದಲ್ಲಿ ವಾಸಿ ಸಲು" ಹೇಗೆ ಸಾಹಸದ ಉದ್ದಕ್ಕೆ ಹೋಯಿತು ಎಂಬುದನ್ನು ಉದಾಹರಿಸುತ್ತದೆ. ಮಾನವ ಕುಲದ ಹುಡುಕುವಿಕೆಯಲ್ಲಿ ಆತನು ಬಂದನು. ಆತನ ಬೋಧನೆಯಿಂದ ಜನರ ಗುಂಪುಗಳು ಹೊರಟು ಹೋದಾಗ ಆತನು ಹೇಗೆ ಪ್ರತಿಕ್ರಿಯೆ ತೋರಿಸಿದನು? ಯೇಸುವು ಮಾಡಿದಂತೆ, ಹೆಚ್ಚಾಗಿ ಯಾರೂ ಜನರು ರಕ್ಷಿಸಲ್ಪಡುವದನ್ನು ಬಯಸಲಿಲ್ಲ; ಆದಾಗ್ಯೂ ಆತನು ನಿಂತುಕೊಂಡು, ಅವರು ಹೋಗುವುದನ್ನು ಗಮನಿಸಿದನು, ಆತನ ಹೃದಯವು ಮುರಿಯಲ್ಪಡುತ್ತಿತ್ತೆಂದು ನನಗೆ ನಿಶ್ಚತೆಯಿದೆ, ಆದರೆ ಆತನು ಅವರ ಹಿಂದೆ ಓಡಲಿಲ್ಲ, ಹಿಂದಿರುಗಬೇಕೆಂದು ಬೇಡಿಕೊಳ್ಳಲಿಲ್ಲ, ಅವರು ಉಳಿದು ಕೊಂಡ ರೆ ತನ್ನ ಸಂದೇಶವನ್ನು ಮೃದುವಾದದ್ದನ್ನಾಗಿ ಮಾಡುವೆನೆಂದು ಹೇಳಲಿಲ್ಲ. ಆತನು ಜೀವದ ರೊಟ್ಟಿಯಾಗಿದ್ದನು. ಹಾಗೂ ಆಗಿರುತ್ತಾನೆ. ಮತ್ತು ನಮ್ಮಲ್ಲಿ ಪ್ರತಿಯೊಬ್ಬರು "ಮನುಷ್ಯಕುಮಾರನ ಮಾಂಸವನ್ನು ತಿನ್ನದೆ ಆನನ ರಕ್ತವನ್ನು ಕುಡಿಯುವದಕ್ಕಿಂತ" ಕಡಿಮೆಯಾದ ಯಾವುದನ್ನೂ ಆತನು ಸ್ವೀಕರಿಸುವದಿಲ್ಲ (6:53). ಅದು ಕಠಿಣವಾದ ಸಂದೇಶವಾಗಿರುತ್ತದೆ, ಆದರೆ ಅದು ಜೀವಕೊಡುವ ಕೇವಲ ಸಂದೇಶವಾಗಿದೆ!

ತನ್ನನ್ನು ಹಿಂಬಾಲಿಸಲಿಕ್ಕೆ ಯೇಸುವು ಕಠಿಣವಾದ ಆಯ್ಕೆ ಮಾಡಲು ಈ ಮೊದಲಿನ ಹಿಂಬಾಲಕರನ್ನು ಯೇಸುವು ಕರೆದಂತೆ, ಆತನು ಇಂದು ನಮ್ಮನ್ನು ಕರೆಯುತ್ತಾನೆ. ಆತನಿಲ್ಲದೆ ನಾವು ತಪ್ಪಿಹೋಗುತ್ತೇವೆಂಬ ಕಠಿಣವಾದ ಸಂದೇಶವನ್ನು ನಾವು ಸ್ವೀಕರಿಸತಕ್ಕದ್ದು, ಮತ್ತು ನಮ್ಮ ವಿಶ್ವಾಸದ ಪಯಣವು ಆಗ ಆತನ ಆಜ್ಞೆಗಳಿಗೆ ವಿಧೇಯರಾಗುವದಕ್ಕೆ ನಮ್ಮನ್ನು ನಡಿಸುವುದು. ಈ ಪಯಣವು ನಂಬಿಕೆಯಿಂದ (ನಮ್ಮ ಜೀವನದಿಂದ ಯೇಸುವನ್ನು ನಂಬುವುದು), ಮಾನಸಾಂತರದಿಂದ (ನಮ್ಮ ಪಾಪದ ಮಾರ್ಗಗಳಿಂದ ಹಿಂತಿರುಗುವುದು), ಮತ್ತು ಬಾಪ್ತಿಸ್ಮದಿಂದ ("[ಹೊಸದಾಗಿ] ನೀರಿನಿಂದಲೂ ಆತ್ಮದಿಂದಲೂ ಹುಟ್ಟುವದರಿಂದ"; ಯೋಹಾನ 3:5) ಪ್ರಾರಂಭವಾಗುತ್ತದೆ. ಆಗ, ಯೋಹಾನನ ಸುವಾರ್ತೆಯ ಮಾತುಗಳನ್ನು ಉಪಯೋಗಿಸಿ, ಆತನು ನಮ್ಮಲ್ಲಿ ನೆಲೆಗೊಳ್ಳುವಂತೆ ಆತನಲ್ಲಿ ನೆಲೆಗೊಳ್ಳುವದನ್ನು ನಾವು ಮುಂದುವರಿಸತಕ್ಕದ್ದು (ಯೋಹಾನ 6:56; 15:4-7).

ಟಿಪ್ಪಣಿಗಳು

[1]Told in Leon Morris, *Expository Reflections on the Gospel of John* (Grand Rapids, Mich.: Baker Book House, 1988), 175. [2]Francis A. Schaeffer, *The God Who ls There* (Downers Grove, Ill.: InterVarsity Press, 1968), 126-31.